**Q.P. Code – 32203**

**Second Semester B.A./B.S.W./B.F.A./B.V.A. Degree Examination, April/May 2019**

*(CBCS Scheme)*

**ಕನ್ನಡ ಭಾಷೆ**

**Paper II – ಕಾವ್ಯ ಸಂಚಯ – ೨, ಆಧುನಿಕ ಕನ್ನಡ ಕವಿತೆಗಳು ಮತ್ತು ಆಯ್ದ ಸಣ್ಣ ಕಥೆಗಳು**

*Time : 3 Hours]* *[Max. Marks : 90*

ಭಾಗ – ೧

ಆಧುನಿಕ ಕನ್ನಡ ಕವಿತೆಗಳು

I. (ಅ) ಒಂದು ಪದ್ಯದ ವಿಶೇಷತೆಯನ್ನು ಕುರಿತು ಬರೆಯಿರಿ : **(1 × 6 = 6)**

1. ಪರಕೀಯರೆಲ್ಲರಾಶೀರ್ವಾದ ಕರವೆತ್ತಿ
ಹರಸುತ್ತ ಬರುವರ್ಶೆ ಮೊದಲು ಮೊದಲು;
ಕಡೆಗದುವೆ ಕುತ್ತಿಗೆಗೆ ಕರವಾಳವಾಗುವುದು;
ನಮ್ಮ ನಾಲಗೆ ನಮಗೆ ಕೀಲು ತೊಡಲು!

2. ಹಿಡಿಯಷ್ಟಿರುವ ತಂಗಿಯನು
ಮುಡಿಯಷ್ಟಿರುವ ಅಕ್ಕ
ಅಕ್ಕರೆಯಿಂದ ಅಪ್ಪುವಳು
ಅಭಯ ನೀಡುವಳು.

(ಆ) ಮೂರನ್ನು ಸಂದರ್ಭ ಸಹಿತ ವಿವರಿಸಿ : **(3 × 3 = 9)**

1. "ಏನು ಕೋಮಲಕಾಯ ಹೊಳಪು ಹೊಸ ಪ್ರಾಯ"
2. "ಅರ್ಥವಿಲ್ಲ ಸ್ವಾರ್ಥವಿಲ್ಲ ಬಿರೀಯ ಭಾವಗೀತಾ".
3. "ಲೋಕಾನೆ ಇಂಗೈತೆ – ನಾನು ಯಾಕ್ ದುಕ್ಕಪಲಿ ಮುನಿಯಂಗು ಯೆಂಡಕ್ಕು ಬೋಲೋರೆ ಜೈ".
4. ನಾಮ ಸಂವತ್ಸರದಲ್ಲಿ ನಿಂತಿರುವ ಈ ನನಗೆ ಯಾವುದು ಮೊದಲು, ಯಾವುದು ಕೊನೆ?

(ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : **(2 × 5 = 10)**

1. ಪ್ರಗತಿ ಶೀಲ
2. ಸಾವೇ
3. ಗೋವಿಂದ ಪೈ

(ಈ) ಒಂದು ವಾಕ್ಯದಲ್ಲಿ ಉತ್ತರಿಸಿ : **(5 × 1 = 5)**

1. ಡಿ.ವಿ.ಜಿ.ಯವರ ಪೂರ್ಣ ಹೆಸರೇನು?
2. ಕನ್ನಡ ಆಚಾರ್ಯ ಪುರುಷನೆಂದು ಯಾರನ್ನು ಕರೆಯುತ್ತಾರೆ?
3. 'ನಂಬಿಕೆ' ಕವಿತೆಯ ಕರ್ತೃ ಯಾರು?
4. ಕನ್ನಡದ ಮೊದಲ ರಾಷ್ಟ್ರಕವಿ ಯಾರು?
5. "ರಾಜ ಸೇವಾಸಕ್ತ" ಬಿರುದು ಪಡೆದ ಸಾಹಿತಿ ಯಾರು?

II. ಎರಡು ಪ್ರಶ್ನೆಗಳಿಗೆ ವಿವರವಾಗಿ ಉತ್ತರಿಸಿ : **(2 × 10 = 20)**

1. ಪವಿತ್ರ ಸ್ನೇಹಕ್ಕೆ ಸಂದ ಜಯವನ್ನು "ಕುಚೇಲೋಪಾಖ್ಯಾನ" ಕವಿತೆಯ ಹಿನ್ನೆಲೆಯಲ್ಲಿ ವಿವರಿಸಿ.
2. 'ಮನೆಯಿಲ್ಲದವರು' ಕವಿತೆಯಲ್ಲಿನ ಬಡತನದ ಧಾರುಣತೆಯನ್ನು ಕುರಿತು ಬರೆಯಿರಿ.
3. 'ರಾಮನ್ ಸತ್ತ ಸುದ್ದಿ' ಕವಿತೆಯ ಸ್ವಾರಸ್ಯವನ್ನು ಬರೆಯಿರಿ.

ಭಾಗ – ೨

ಆಯ್ದ ಸಣ್ಣ ಕಥೆಗಳು

III. (ಅ) ಒಂದರ ಸ್ವಾರಸ್ಯವನ್ನು ಬರೆಯಿರಿ : **(1 × 5 = 5)**

1. ನಿಮ್ಮಪ್ಪನ ಜೊತೆ ನೀನೂ ಊರ್‍ಗೆ ಹೋದ್ರೆ ಬಾಕಿ ತೀರ್‍ಸೋರ‍್ಯಾರ್‍ಲೆ ಬಸ್ಯ, ಇಲ್ಲೇನು ನಿಂಗ ಬಾಳ ಕೆಲ್ಸ ಐತ ಸೆಗಣ ಬಳಿಯೋದು, ದನ ಕಾಯೋದು ಕಮ್ಮಗ ಉಂಡಿರೋದು ಬಿಟ್ಟು ಊರ್‍ಗೆ ಯಾಕ ಹೋಗ್ತಿ, ಎನ್ನುತ್ತ ಮುಂದೆ ಬರತೋಡಗಿದ ಗೌಡ ಇನ್ನೇನು ತನ್ನನ್ನ ಹಿಡಿದೆ ಬಿಡುತ್ತಾನೆಂಬ ಭಯದಿಂದ "ಇಲ್ಲಾ ss..... ನಿಮ್ಮನಿಯಾಗ ಸಂಬ್ಳಕ್ಕ ಇರಾದಿಲ್ಲ..... ನಾನೂ ನಮ್ಮಪ್ಪನ್ನೊಟ್ಟೆ ಊರಿಗೊಕ್ಕಿನಿ".

2. ಬೇಸಿಗೆಯು ಹೋಗಿ ಮುಂಗಾರು ಮಳೆಯ ಮೋಡವೆದಿದ್ದು ಆದೊಂದು ರಾತ್ರಿ ಬೂದನೆದ್ದು ಅಳತೊಡಗಿದ "ಆಯ್ಯೋ! ಗಾಳೀ! ಗಾಳೀ! ನಮ್ಮ ಬಾಳೆ ಮುರಿದ ಬಿದ್ದರ್!" ಎಂದು ಬಿಕ್ಕಿ ಬಿಕ್ಕಿ ಕೂಗಿದ ತೌಡನೆದ್ದು ಹೋಗಿ ಆದಕ್ಕೆ ಸುತ್ತಲೂ ನಾಲ್ಕು ಕೊತ್ತಳಿಗೆಗಳನ್ನು ಊತುಕೊಟ್ಟು ಕಟ್ಟಿ ತೋರಿಸಿ ಸಮಾಧಾನಗೊಳಿಸಿದ ಮೇಲೆ ಹುಡುಗನು ಹೋಗಿ ತಿರುಗಿ ನಿದ್ದೆ ಮಾಡಿದ.

(ಆ) ಮೂರನ್ನು ಸಂದರ್ಭ ಸಹಿತ ವಿವರಿಸಿ : **(3 × 2 = 6)**

1. ಏನ್ ಅಯ್ಯಂಗಾರರೇ? ಕ್ಷೇಮವೇ?
2. "ನಾನು ದೃಷ್ಟಿಯನ್ನು ಪಡೆದದ್ದು ಸಾರ್ಥಕವಾಯಿತ್ತು. ನನಗಿನ್ನೇನು ಬೇಕಿಲ್ಲ".
3. ಆದೇಕೆ ರಾಜೆ ನನಗೆ ಕಾಣಿಸಿಕೊಳ್ಳುವುದಿಲ್ಲ?
4. "ನಡೆ ದೇವಿ ಶಕುಂತಲೆ, ಪೂಜ್ಯರು ತಮ್ಮ ನಿರೀಕ್ಷೆಯಲ್ಲಿದ್ದಾರೆ".

(ಇ) ಒಂದಕ್ಕೆ ಟಿಪ್ಪಣಿ ಬರೆಯಿರಿ : (1 × 4 = 4)

1. ನವ್ಯ ಸಾಹಿತ್ಯ

2. ಪಂಜೆ ಮಂಗೇಶರಾಯರು

(ಈ) ಒಂದು ವಾಕ್ಯದಲ್ಲಿ ಉತ್ತರಿಸಿ : (5 × 1 = 5)

1. ಮಕ್ಕಳ ಸಾಹಿತ್ಯದ ಪಿತಾಮಹ ಯಾರು?

2. ಮುನಿಯ ಯಾರು?

3. ಕನ್ನಡದ ಆಸ್ತಿ ಎಂದು ಯಾರನ್ನು ಕರೆಯುತ್ತಾರೆ?

4. ನಲ್ಲೂರು ನೀಲಾಂಬೆಯ ತಮ್ಮ ಯಾರು?

5. ಪುನರ್ವಿವಾಹ ಕಥೆಯ ಲೇಖಕರು ಯಾರು?

IV. ಎರಡು ಪ್ರಶ್ನೆಗಳಿಗೆ ಉತ್ತರಿಸಿ : (2 × 10 = 20)

1. ಜಮೀನ್ದಾರಿ ವ್ಯವಸ್ಥೆಯ ಕ್ರೌರ್ಯ "ದನಿಯರ ಸತ್ಯನಾರಾಯಣ" ಕತೆಯಲ್ಲಿ ಹೇಗೆ ವ್ಯಕ್ತವಾಗಿದೆ? ವಿವರಿಸಿ.

2. "ಬೀದಿಯಲ್ಲಿ ಹೋಗುವ ನಾರಿ" ಕಥೆಯಲ್ಲಿ ಶ್ರೀನಿವಾಸಯ್ಯನ ವ್ಯಕ್ತಿತ್ವ ಹೇಗೆ ನಿರೂಪಣೆಗೊಂಡಿದೆ? ತಿಳಿಸಿ.

3. 'ಹುಗ್ಗಿ' ಕತೆಯಲ್ಲಿ ಹಸಿವು ಮತ್ತು ಶೋಷಣೆ ಹೇಗೆ ವ್ಯಕ್ತಗೊಡಿದೆ? ವಿವರಿಸಿ.

---